ದೇವರ ಹೊನ್ನಾಳಿ ಏತ ನೀರಾವರಿ ಯೋಜನೆ

218 - ಶ್ರೀ ಡಿ.ಬಿ. ಗಂಗಪ್ಪ (ಹೊನ್ನಾಳಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿ ಏತ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ;*

ಆ) *ಈ ವರ್ಷ ಆ ಯೋಜನೆಯನ್ನು ಪ್ರಾರಂಭಿಸಲಾಗುವುದೆ?*

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಅಂದಾಜು ಪಟ್ಟಿ ತಯಾರಾಗಿದ್ದು, ಪರಿಶೀಲನೆಯಲ್ಲಿದೆ.

ಆ) ಸಾಧ್ಯವಾಗುವುದಿಲ್ಲ.

ಗೋವಿನ ಕೋವಿ ಹತ್ತಿರ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ

216 - ಶ್ರೀ ಡಿ.ಬಿ. ಗಂಗಪ್ಪ (ಹೊನ್ನಾಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊನ್ನಾಳಿ ತಾಲ್ಲೂಕಿನ ಗೋವಿನಕೋವಿ ಹತ್ತಿರ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ ಮಾಡಲು ಸರ್ಕಾರ ಆಲೋಚಿಸಿದೆಯೆ.*

ಆ) *ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ.*

ಇ) *ಅದರ ನಿರ್ಮಾಣವನ್ನು ಈ ವರ್ಷ ಪ್ರಾರಂಭಿಸಲಾಗುವುದೇ.*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) ಈ ಸೇತುವೆ ಕಾಮಗಾರಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ರೂ. 2.75 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ. ಈ ಬೃಹತ್ ವೆಚ್ಚದ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಸಿಆರ್‌ಎಫ್ ನಿಧಿಯಡಿಯಲ್ಲಿ ಪ್ರಸ್ತಾಪಿಸದರೂ ಫಲಪ್ರದವಾಗಿರುವುದಿಲ್ಲ. ಕಾರಣ ಈಗಾಗಲೇ ಸುಮಾರು ರೂ. 115ಕೋಟಿ ಸಿಆರ್‌ಎಫ್ ನಿಧಿಯಡಿಯಲ್ಲಿ ಕಾಮಗಾರಿಗಳು ಇನ್ನೂ ಅನುಮೋದನೆಯಾಗದ ಕಾರಣ ಇದನ್ನು ಕಳುಹಿಸುವುದರಿಂದ ಪ್ರಯೋಜನವಾಗಲಾರದು. ಅದರಿಂದ, ಇದನ್ನು ರಾಜ್ಯ ಆಯವ್ಯಯದಲ್ಲಿಯೇ ತೆಗೆದು ಕೊಳ್ಳುವ ಬಗ್ಗೆ ಹೊಸ ಕಾಮಗಾರಿಗಳ ಪಟ್ಟಿಯಲ್ಲಿ ಪ್ರಸ್ತಾಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ವ ಆಹಾರ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಸುತ್ತಗಟ್ಟಿ ಗ್ರಾಮಗಳಿಗೆ ಗೋಡೌನ್

78 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ): ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಸುತಗಟ್ಟ ಗ್ರಾಮದಲ್ಲಿ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ ವಿಶ್ವ ಆಹಾರ ಯೋಜನೆಯಡಿಯಲ್ಲಿ ಗೋಡೌನ ಹಾಗೂ ಆಫೀಸ್ ಕಟ್ಟಡ ಕಟ್ಟಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ?*

ಆ) *ಹಾಗಿಗಲ್ಲಿ ಸರ್ಕಾರದವರು ಈ ಬಗೆ ಕೈಗೊಂಡ ಕ್ರಮಗಳೇನು?*